

ಕೋವಿಡ್ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕೊರೊನಾ ವೈರಸ್ ಮಾದರಿಯ ಹೆಲ್ಮೆಟ್ ಧರಿಸಿರುವ ಹೈದರಾಬಾದ್‌ನ ಅಶ್ವಾರೋಹಿ ಪೊಲೀಸ್.

ಭಾರತದಲ್ಲಿ ದ್ವಿಚಕ್ರ ವಾಹನ ಹೊಂದಿರುವುದು ಸಾರ್ವಜನಿಕ ಸಾರಿಗೆ ವಾಹನಗಳ ಅವಲಂಬನೆಗಿಂತ ಹೆಚ್ಚು ಅನುಕೂಲಕರ ಎಂಬ ನಂಬಿಕೆ ಇದೆ. ಹೀಗಾಗಿ ವಾಹನಗಳ ಸಂಖ್ಯೆ ಏರಿಕೆಯಿಂದ ರಸ್ತೆಯಲ್ಲಿ ಅಪಘಾತಗಳ ಸಂಖ್ಯೆಯೂ ಏರುಮುಖವಾಗಿದೆ. ದ್ವಿಚಕ್ರ ವಾಹನಗಳ ಅಪಘಾತದಲ್ಲಿ ಹೆಲ್ಮೆಟ್ ಇಲ್ಲದಿರುವುದೇ ಅಪಾಯಕ್ಕೆ ಬಹುದೊಡ್ಡ ಕಾರಣ ಎಂಬುದು ಹಲವು ಪ್ರಕರಣಗಳಲ್ಲಿ ಸಾಬೀತಾಗಿದೆ. ಹೀಗಾಗಿ ಸರಿಯಾದ ಮತ್ತು ಹೆಚ್ಚು ಸುರಕ್ಷಿತ ಹೆಲ್ಮೆಟ್ ಆಯ್ಕೆ ಹೇಗಿರಬೇಕು ಎಂಬುದೂ ಒಂದು ದೊಡ್ಡ ಪ್ರಶ್ನೆ.

ಹೆಲ್ಮೆಟ್ ಎಂಬ ಸಾಧನ ಚಚ್ಚೌಕವಾಗಿ ನಮ್ಮ ತಲೆ ಹಾಗೂ ಮುಖದ ಭಾಗವನ್ನು ಮುಚ್ಚಲಿದೆ. ಹೆಲ್ಮೆಟ್ ಅನ್ನು ಸರಿಯಾಗಿ ಹೊಂದಿಸಿಕೊಳ್ಳಲು ಬೆಲ್ಟ್ ನೀಡಲಾಗಿರುತ್ತದೆ. ಮುಂಭಾಗದಲ್ಲಿ ಸ್ಪಷ್ಟವಾಗಿ ಕಾಣುವಂತೆ ಗಟ್ಟಿ ಪ್ಲಾಸ್ಟಿಕ್‌ನ ಪಾರದರ್ಶಕ ಪರದೆ ಇರುತ್ತದೆ. ಇದು ರಸ್ತೆ ವೀಕ್ಷಣೆಗೆ ಯಾವುದೇ ಅಡಚಣೆ ಉಂಟು ಮಾಡದೆ, ಕಣ್ಣು ಮತ್ತು ಮೂಗಿಗೆ ಹೆಚ್ಚು ರಕ್ಷಣೆ ನೀಡುತ್ತದೆ. ಅದರಲ್ಲೂ ಸವಾರನ ಚಾಲನೆಗೆ ತಕ್ಕಂತೆ ಇದನ್ನು ಮುಚ್ಚುವುದು ಅಥವಾ ತೆರೆಯಲು ಅವಕಾಶ ನೀಡಲಾಗಿರುತ್ತದೆ. ಆದರೆ ಇದು ಸದಾ ಮುಚ್ಚಿದ್ದರೆ ಒಳ್ಳೆಯದು.

ಮಾರುಕಟ್ಟೆಯಲ್ಲಿ ಲಭ್ಯವಿರುವ ಎಲ್ಲಾ ಹೆಲ್ಮೆಟ್‌ಗಳು ಎಲ್ಲರಿಗೂ ಸರಿ ಹೊಂದುವುದಿಲ್ಲ. ಒಬ್ಬೊಬ್ಬರ ತಲೆಯ ಅಳತೆ ಒಂದೊಂದು ರೀತಿಯಲ್ಲಿ ಇರುವುದರಿಂದ ಹೆಲ್ಮೆಟ್‌ಗಳನ್ನು ಸರಾಸರಿ ಅಳತೆಗೆ ತಕ್ಕಂತೆ ವಿಂಗಡಿಸಿ ವಿನ್ಯಾಸ ಮಾಡಿರಲಾಗುತ್ತದೆ. ಸಿದ್ಧ ಉಡುಪುಗಳಲ್ಲಿ ಇರುವಂತೆಯೇ ಇವುಗಳಲ್ಲೂ ಅಳತೆ ಪಟ್ಟಿ ಇರುತ್ತದೆ. ಅತಿ ಚಿಕ್ಕದು ಅಂದರೆ 'ಎಕ್ಸ್‌ಎಸ್'ನಿಂದ ಹಿಡಿದು ದೊಡ್ಡದಾದ 'ಎಕ್ಸ್‌ಎಕ್ಸ್‌ಎಲ್'ವರೆಗೂ ಇರುತ್ತದೆ. ಇವುಗಳ ನಡುವೆ ಸೆಂಟಿ ಮೀಟರ್ ಅಥವಾ ಮಿಲಿ ಮೀಟರ್ ಅಳತೆಯ ವ್ಯತ್ಯಾಸವಿರುತ್ತದೆ. ಇವುಗಳ ಅಳತೆ ಬ್ರಾಂಡ್‌ಗಳಿಂದ ಬ್ರಾಂಡ್‌ಗಳಿಗೆ ಕೆಲವೊಮ್ಮೆ ವ್ಯತ್ಯಾಸವಿರುತ್ತದೆ.

ಇನ್ನೂ ಕೆಲವು ಸಂದರ್ಭಗಳಲ್ಲಿ ಬೇರೊಬ್ಬ ವ್ಯಕ್ತಿಯ ಹಣೆ ಸುತ್ತಳತೆಯ ಗಾತ್ರದಷ್ಟೇ ನಮ್ಮದೂ ಇರಬಹುದು. ಆದರೂ ಕೆಲವೊಂದು ಹೆಲ್ಮೆಟ್‌ಗಳು ನಮ್ಮ ತಲೆಗೆ ಸರಿಯಾಗಿ ಹೊಂದಿಕೆಯಾಗುವುದಿಲ್ಲ, ಆರಾಮ ಎನಿಸುವುದಿಲ್ಲ. ಇದಕ್ಕೆ ಮುಖ್ಯ ಕಾರಣ ತಲೆಯ ಆಕಾರ. ಇದರಲ್ಲೂ ಒಬ್ಬೊಬ್ಬರದ್ದು ಒಂದೊಂದು ರೀತಿ. ಗೋಲಾಕಾರ, ಮೊಟ್ಟೆಯಾಕಾರ ಹೀಗೆ ಭಿನ್ನ ಆಕಾರದ ತಲೆಗಳು ಇರುತ್ತವೆ.

ಹೆಲ್ಮೆಟ್ ಒಳಗಿರುವ ಪ್ಯಾಡಿಂಗ್ ತಲೆಯ ಆಕಾರಕ್ಕೆ ತಕ್ಕಂತೆ ವಿನ್ಯಾಸಗೊಳಿಸಲಾಗುತ್ತದೆ. ಹೆಲ್ಮೆಟ್ ತಯಾರಿಕಾ ಕಂಪನಿಗಳಲ್ಲಿ ಉತ್ತಮ ಕಂಪನಿಗಳು ಹೆಲ್ಮೆಟ್ ಹೊರಗೆ 2ರಿಂದ 3 ಸುರಕ್ಷತಾ ಪದರಗಳನ್ನು ನೀಡಿರುತ್ತವೆ. ಹಾಗೆಯೇ ಒಳಭಾಗದಲ್ಲಿ ನೀಡುವ ಪ್ಯಾಡಿಂಗ್ ಹೆಲ್ಮೆಟ್ ಅಳತೆಯನ್ನು ನಿರ್ಧರಿಸುತ್ತದೆ. ಅಂದರೆ 'ಎಲ್' ಗಾತ್ರಕ್ಕೆ ಹೋಲಿಸಿದಲ್ಲಿ, 'ಎಂ' ಗಾತ್ರದಲ್ಲಿ ಹೆಚ್ಚು ಪ್ಯಾಡಿಂಗ್ ಕೊಡಲಾಗಿರುತ್ತದೆ.

ಹೆಲ್ಮೆಟ್ ತಯಾರಿಕೆಯಲ್ಲಿ ಸುರಕ್ಷತೆಗೆ ಎಷ್ಟು ಪ್ರಾಮುಖ್ಯತೆ ನೀಡಲಾಗುತ್ತದೆಯೋ, ಅಷ್ಟೇ ಪ್ರಾಮುಖ್ಯತೆಯನ್ನು ಅದನ್ನು ತೊಡುವವರ ಆರಾಮದಾಯಕ ಅನುಭವಕ್ಕೂ ನೀಡಲಾಗುತ್ತದೆ. ಹಾಗಿದ್ದರೆ ಹೆಚ್ಚು ಆರಾಮದಾಯಕ ಹೆಲ್ಮೆಟ್‌ನ ಆಯ್ಕೆ ಹೇಗೆ? ಒಂದಷ್ಟು ಸಲಹೆಗಳು ಇಲ್ಲಿವೆ.

- ಮುಖದ ತ್ವಚೆಗೆ ಹೆಲ್ಮೆಟ್ ಒಳಗಿನ ಪ್ಯಾಡಿಂಗ್‌ಗೆ



**ಹೆಲ್ಮೆಟ್ ಆಯ್ಕೆಗೆ ತಲೆ ಸುತ್ತಳತೆ (ಸೆಂಟಿ ಮೀಟರ್‌ಗಳಲ್ಲಿ)**

| ಬ್ರಾಂಡ್ | ಸ್ಮಾಲ್ (ಎಸ್) | ಮೀಡಿಯಂ (ಎಂ) | ಲಾರ್ಜ್ (ಎಲ್) | ಎಕ್ಸ್‌ಟ್ರಾ ಲಾರ್ಜ್ (ಎಕ್ಸ್‌ಎಲ್) |
|---|---|---|---|---|
| ವೇಗಾ | 55–57 | 57–59 | 59–61 | 61–63 |
| ಸ್ಟಡ್ಸ್ | – | 57 | 58 | 60 |
| ಸ್ಟೀಲ್ ಬರ್ಡ್ | 54–56 | 56–58 | 60–62 | – |
| ಇತರೆ | 55–57 | 57–59 | 59–61 | 61–63 |